**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/258/ಪಿಹೆಚ್‌ಡಿ/ಮುವೇಬ/ಎಜಿ 2016-17/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು, ದಿನಾಂಕ: 16-11-2018.

**ಸುತ್ತೋಲೆ**

ವಿಷಯ: 2006 ರಿಂದ 23.12.2009ರವರೆಗೆ ಪಿ.ಹೆಚ್.ಡಿ ಪದವಿ ಪಡೆದ ಬೋಧಕರುಗಳಿಗೆ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾಗಿದ್ದು ಅಂತಹ ಪ್ರಕರಣಗಳನ್ನು 01.01.2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಪರಿಷ್ಕರಿಸುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಇಡಿ/195/ಡಿಸಿಇ/2014, ದಿನಾಂಕ:28.04.2017.

*****

**ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ 01.01.2006ರ ನಂತರ ಪಿ.ಹೆಚ್.ಡಿ ಪದವಿ ಪಡೆದ ಪ್ರಕರಣಗಳಲ್ಲಿ ಮುಂಗಡ ವೇತನ ಬಡ್ತಿಗಳನ್ನು 01.01.2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಈಗಾಗಲೇ 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾದ ಪ್ರಕರಣಗಳನ್ನು ಪರಿಷ್ಕರಿಸುವ ಸಲುವಾಗಿ ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:27.06.2017ರಲ್ಲಿ ಮಾಹಿತಿ ಒದಗಿಸಲು ಕೋರಲಾಗಿತ್ತು ಆದರೆ ನಿಗಧಿತ ನಮೂನೆಯಲ್ಲಿನ ಸ್ಪಷ್ಟ ಮಾಹಿತಿಯು ಈ ಕಛೇರಿಗೆ ಸ್ವೀಕೃತವಾಗಿರುವುದಿಲ್ಲ ಆದ್ದರಿಂದ** 2006 ರಿಂದ 23.12.2009ರ ವರೆಗೆ **ಪಿ.ಹೆಚ್.ಡಿ ಪದವಿ ಪಡೆದ ಬೋಧಕರುಗಳಿಗೆ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿಗಳನ್ನು 1996ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾಗಿದ್ದು ಅಂತಹ ಪ್ರಕರಣಗಳನ್ನು 01.01.2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಶೇಕಡ 3%ರ ದರದಲ್ಲಿ** ಮೂಲ ವೇತನಕ್ಕೆ ಸೇರಿಸಿ ಪರಿಷ್ಕರಿಸುವ ಸಂಬಂಧ ಈ ಕೆಳಕಂಡ ಮಾಹಿತಿ/ದಾಖಲೆಗಳನ್ನು ಕೂಡಲೇ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

1) 1996 ಯುಜಿಸಿ ವೇತನ ಶ್ರೇಣಿಯಲ್ಲಿ ಪಿ.ಹೆಚ್.ಡಿ ಮುಂಗಡ ವೇತನ ಬಡ್ತಿ ಮಂಜೂರು ಮಾಡಲಾಗಿರುವ ಆದೇಶದ ಪ್ರತಿ.
2) ಕರ್ತವ್ಯಕ್ಕ ವರದಿ ಮಾಡಿಕೊಂಡಿರುವ ಬಗ್ಗೆ ದಾಖಲೆ (ಸೇವಾ ಪೂರ್ವಾವಧಿ ಘೋಷಣೆ ಪ್ರತಿ).
3) ಪಿ.ಹೆಚ್.ಡಿ ಪದವಿ ಪಡೆದ ಫಲಿತಾಂಶದ ಪ್ರತಿ (ನೋಟಿಫಿಕೇಷನ್).
4) 2006ರ ಯುಜಿಸಿ ವೇತನ ಶ್ರೇಣಿಯಲ್ಲಿ ಪಿಹೆಚ್‌ಡಿ ಪದವಿ ಪಡೆದ ದಿನಾಂಕಕ್ಕೆ ಲಭ್ಯವಾಗುವ ಮೂಲ ವೇತನ ಹಾಗೂ ಎಜಿಪಿ ದಾಖಲೆ ಸಲ್ಲಿಸುವುದು. ಸದರಿ ಮೂಲ ವೇತನವನ್ನು ಪರಿಗಣಿಸುವಾಗ ಪಿ.ಹೆಚ್.ಡಿ ಪದವಿ ಪಡೆದ ದಿನಾಂಕದವರೆಗೆ ಲಭ್ಯವಾಗುವ ಮತ್ತು ಮಂಜೂರಾಗಿರುವ ಸ್ಥಾನೀಕರಣ/ಉನ್ನತ ಎ.ಜಿ.ಪಿ ಸೌಲಭ್ಯಗಳನ್ನು ಪರಿಗಣಿಸಿ ಈಗಾಗಲೇ

೧೯೯೬ರ ಯುಜಿಸಿ ವೇತನ ಶ್ರೇಣಿಯಲ್ಲಿ ಮಂಜೂರು ಮಾಡಲಾದ ಪಿಹೆಚ್‌ಡಿ ಮುಂಗಡ ವೇತನ ಬಡ್ತಿಗಳನ್ನು ಮೂಲ ವೇತನಕ್ಕೆ ಸೇರಿಸದೇ ಮಾಡಲಾದ ವೇತನ ನಿಗದೀಕರಣದನ್ವಯ ಮೂಲ ವೇತನ ಮತ್ತು ಎ.ಜಿ.ಪಿಗಳನ್ನು ಪರಿಗಣಿಸತಕ್ಕದ್ದು. ಪೂರಕವಾಗಿ, ಪಿ.ಹೆಚ್.ಡಿ ಪದವಿ ದಿನಾಂಕಕ್ಕೆ ಗ್ರೂಪ್-ಬಿ ಪ್ರವರ್ಗಕ್ಕೆ ಸೇರಿರುವ ಸಿಬ್ಬಂದಿಗಳ ಪ್ರಕರಣಗಳಲ್ಲಿ ಪ್ರಾಂಶುಪಾಲರಿಂದ ಹೊರಡಿಸಲಾದ ವೇತನ ನಿಗದೀಕರಣದ ಆದೇಶ, ಪಿ.ಹೆಚ್.ಡಿ ಪದವಿ ದಿನಾಂಕಕ್ಕೆ ಗ್ರೂಪ್-ಎ ಪ್ರವರ್ಗಕ್ಕೆ ಸೇರಿರುವ ಸಿಬ್ಬಂದಿಗಳ ಪ್ರಕರಣಗಳಲ್ಲಿ ಮಹಾಲೇಖಪಾಲರಿಂದ ನೀಡಲಾದ ವೇತನ ಪಟ್ಟಿಯನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.

೫) ಈ ಕೆಳಕಂಡ ನಮೂನೆಯನ್ನು ಭರ್ತಿ ಮಾಡಿ ಪ್ರಾಂಶುಪಾಲರು ದೃಢೀಕರಿಸಿ ಸಲ್ಲಿಸತಕ್ಕದ್ದು.

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

## ನಮೂನೆ

**ಕಾಲೇಜಿನ ಹೆಸರು:**

| ಕ್ರ ಸಂ | ಉಪನ್ಯಾಸಕರ ಹೆಸರು & ವಿಷಯ | ಈಗಾಗಲೇ ಮಂಜೂರು ಮಾಡಲಾದ ಮುಂಗಡ ವೇತನ ಬಡ್ತಿಗಳ ಆದೇಶದ ಪ್ರತಿ | ಪಿ.ಹೆಚ್.ಡಿ ಪಡೆದ ದಿನಾಂಕಕ್ಕೆ ೨೦೦೬ರ ಯುಜಿಸಿ ಶ್ರೇಣಿಯಲ್ಲಿ ಪಡೆಯುತ್ತಿದ್ದ ವೇತನ+ಎಜಿಪಿ | ಮಂಜೂರು ಮಾಡಬೇಕಾದ ಮುಂಗಡ ವೇತನ ಬಡ್ತಿಗಳ ದರ | ಸಂಖ್ಯೆ | ಮೂಲ ವೇತನಕ್ಕೆ ಸೇರಿಸಬೇಕಾದ ಒಟ್ಟು ಮುಂಗಡ ವೇತನ ಬಡ್ತಿ ಮೊತ್ತ(೫*೬) | ಮುಂಗಡ ವೇತನ ಬಡ್ತಿಗಳನ್ನು ಮೂಲ ವೇತನಕ್ಕೆ ಸೇರಿಸಿದ ನಂತರ ಮೂಲ ವೇತನ &ಎಜಿಪಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |

**ಪ್ರಾಂಶುಪಾಲರು**